ಕೊಳಚೆ ಪ್ರದೇಶ ಮಕ್ಕಳಿಗೆ ಪೌಷ್ಟಿಕ ಆಹಾರ ನೀಡಿಕೆ

ಹುಬ್ಬಳ್ಳಿ, ಜು. 7: ಇಲ್ಲಿನ ಸಿದ್ದೇಶ್ವರ ನಗರದ ಆಶ್ರಯ ಕಾಲನಿ ಕೊಳಚೆ ಪ್ರದೇಶದ ಮಕ್ಕಳಿಗೆ ಪೌಷ್ಟಿಕ ಆಹಾರ ನೀಡಿಕೆ ವಿವಿಧ ಸ್ವಯಂ ಸೇವಾ ಸಂಸ್ಥೆಗಳ ಆಶ್ರಯದಲ್ಲಿ ಆರಂಭಗೊಂಡಿದೆ.

ಮಾನವ ಚಾರಿಟೆಬಲ್ ಸಂಸ್ಥೆಯು ಡಿಸ್ಕವರಿ ಸೊಸೈಟಿ ಹಾಗೂ ಗೋಕುಲ ರಿಸೋರ್ಸಿಂಗ್ ಸಹಯೋಗದಲ್ಲಿ ಇತ್ತೀಚೆಗೆ ಜರುಗಿದ ಕಾರ್ಯಕ್ರಮದಲ್ಲಿ ಮಕ್ಕಳಿಗೆ ಪೌಷ್ಟಿಕ ಆಹಾರ ವಿತರಣೆಗೆ ಚಾಲನೆ ನೀಡಲಾಯಿತು.

ಕೊಳಚೆ ಪ್ರದೇಶದ ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಿದ್ದು, ಅವರಿಗೆ ಪೌಷ್ಟಿಕ ಆಹಾರ ನೀಡಿಕೆ ದೃಷ್ಟಿಯಿಂದ ಈ ಯೋಜನೆ ಅಯೋಜಿಸಲಾಗಿದೆ. ಮಕ್ಕಳಿಗೆ ಗುರುತಿನ ಚೀಟಿ ನೀಡಲಾಗುತ್ತದೆ. ಪ್ರತಿದಿನ ಬೆಳಗ್ಗೆ 7.30ರಿಂದ 8.30 ಗಂಟೆವರೆಗೆ ಪೌಷ್ಟಿಕ ಆಹಾರ ನೀಡಲಾಗುತ್ತದೆ. ಆರಂಭದಲ್ಲಿ 100 ಮಕ್ಕಳಿಗೆ ಆಹಾರ ನೀಡುತ್ತಿದ್ದು ಇದನ್ನು 1,500 ಮಕ್ಕಳಿಗೆ ಹೆಚ್ಚಿಸುವ ಗುರಿ ಹೊಂದಲಾಗಿದೆ.

ರಾಜ್ಯದಲ್ಲಿ ಹುಬ್ಬಳ್ಳಿ ಸೇರಿದಂತೆ ಮೈಸೂರು, ಮಂಡ್ಯ, ಕಲಬುರ್ಗಿ, ವಿಜಾಪುರ, ಬೆಳಗಾವಿ ಹಾಗೂ ಹರಿಹರಗಳಲ್ಲಿ ಯೋಜನೆ ವಿಸ್ತರಿಸಲಾಗುತ್ತಿದೆ ಎಂದು ಮಾನವ ಚಾರಿಟೆಬಲ್ ಕಾರ್ಯದರ್ಶಿ ರಾಜೇಂದ್ರ ಕುಲಕರ್ಣಿ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉದಯವಾಣಿ

SK

Samyukta karnataka

ಹುಬ್ಬಳ್ಳಿಯ ಸಿದ್ದೇಶ್ವರಯ್ಯ ಆಶ್ರಯ ಕಾಲನಿ ಕೊಳಚೆ ಪ್ರದೇಶದ ಮಕ್ಕಳಿಗೆ ಮಾನವ ದತ್ತಿ ಸಂಸ್ಥೆ ವತಿಯಿಂದ ಪೌಷ್ಟಿಕ ಆಹಾರ ವಿತರಿಸಲಾಯಿತು

ಆಶ್ರಯ ಕಾಲನಿ ಮಕ್ಕಳಿಗೆ ಪೌಷ್ಟಿಕ ಆಹಾರ

ಹುಬ್ಬಳ್ಳಿ, 9- ಮಾನವ ಚಾರಿಟೇಬಲ್ ಸಮಾಜ ಸೇವಾ ಸಂಸ್ಥೆ, ಎನ್‌ಜಿಒ ಫಂಡ್ ರೈಸರ್, ಡಿಸ್ಕವರಿ ಸೊಸೈಟಿ, ಗೋಕುಲ ರೆಸ್ಕೋರ್ಸಿಂಗ್ ಸಹಯೋಗದಲ್ಲಿ ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಮಕ್ಕಳಿಗೆ ಪೌಷ್ಟಿಕ ಆಹಾರ ವಿತರಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಇಲ್ಲಿಯ ಸಿದ್ದೇಶ್ವರಯ್ಯ ಆಶ್ರಯ ಕಾಲನಿ ಕೊಳಚೆ ಪ್ರದೇಶದ ಮಕ್ಕಳಿಗೆ ಇತ್ತೀಚೆಗೆ ಆಹಾರ ವಿತರಣೆ ಆರಂಭಿಸಲಾಯಿತು. ದಿನಗೂಲಿಯ ಆದಾಯದಲ್ಲಿ ಬದುಕು ಸಾಗಿಸುತ್ತಿರುವವರ ಮಕ್ಕಳಿಗೆ ಬೆಳವಣಿಗೆಗೆ ಮೂರನೆ, ಅವಶ್ಯಕ ಪೌಷ್ಟಿಕ ಆಹಾರ ದೊರೆಯದೆ ಹೋಗುತ್ತಿರುವುದನ್ನು ಮನಗಂಡು ಮಾನವ ಚಾರಿಟೇಬಲ್ ಸಂಸ್ಥೆ ಈ ಕ್ರಮ ಕೈಗೊಂಡಿದೆ.

ಮಾನವ ಚಾರಿಟೇಬಲ್ ಸಂಸ್ಥೆಯ ಕಾರ್ಯದರ್ಶಿಗಳಾದ ರಾಜೇಂದ್ರ ಕುಲಕರ್ಣಿ, ಎನ್‌ಜಿಒ ಫಂಡ್‌ರೈಸರ್ ನಿರ್ದೇಶಕ ವಿ. ಶ್ರೀಧರ ಹಾಗೂ ಡಿಸ್ಕವರಿ ಸೊಸೈಟಿ ನೇತೃತ್ವದಲ್ಲಿ ಈಗಾಗಲೆ 100 ಮಕ್ಕಳಿಗೆ ಪೌಷ್ಟಿಕ ಆಹಾರ ವಿತರಣೆ ಆರಂಭವಾಗಿದ್ದು ಮುಂದಿನ ದಿನಗಳಲ್ಲಿ 1,500 ಮಕ್ಕಳಿಗೆ ಆಹಾರ ವಿತರಿಸುವ ಉದ್ದೇಶ ಹೊಂದಲಾಗಿದೆ.

ಬೆಂಗಳೂರಿನಲ್ಲಿ ಕೇಂದ್ರ ಕಚೇರಿ ಹೊಂದಿರುವ ಈ ಸಂಸ್ಥೆ 1999 ರಿಂದ ಸೇವಾ ಕಾರ್ಯ ಆರಂಭಿಸಿದೆ. 2010 ರಿಂದ ಬೆಂಗಳೂರಿನ ಬೈಯಪ್ಪನಹಳ್ಳಿ ಕೊಳಚೆ ಪ್ರದೇಶದ ಮಕ್ಕಳಿಗೆ ಆಹಾರ ವಿತರಣೆ ಆರಂಭಿಸಿದೆ. ರಾಜ್ಯವ್ಯಾಪಿ ಕಾರ್ಯಕ್ರಮ ವಿಸ್ತರಿಸುವ ದೃಷ್ಟಿಯಿಂದ ಮೈಸೂರು, ಹುಬ್ಬಳ್ಳಿ, ಮಂಡ್ಯ, ಕಲ್ಬುರ್ಗಿ, ವಿಜಾಪುರ, ಬೆಳಗಾವಿ, ಹರಿಹರ ನಗರದ ಕೊಳಚೆ ಪ್ರದೇಶಗಳಲ್ಲಿ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗುತ್ತಿದೆ.